ಪೂಜಾರಯ್ಯ ತೀರ್ಮಾನದ ಮಾತಾಡಿದರು: ನಾಳೆ ತಾಯಿಯ ಮುಂದೆ ಮಾದೇವಿಯನ್ನು ಕರೆಸಿ ತಪ್ಪು ಕಾಣಿಕೆ ಇಡಿಸುವುದು. ಮುಂದಿನ ದಿನಗಳಲ್ಲಿ ಯಾವನಾದರೂ ಹೆಂಡಿರು ತೀರಿಕೊಂಡ ಕುಲಸ್ತನಿಗೆ ಬೇಕಾದರೆ ಕೂಡಾವಳಿ ಮಾಡಿಸುವುದು. 'ಇದ್ಕೆ ಒಪ್ಪಿಯೇ ತಾನಮ್ಮೆ ಮಾದೇವಿ' ಅಂದು ಪೂಜಾರಯ್ಯ ಕಟ್ಟೆಯ ಕೆಳಗಿನ ಹೆಂಗಸಿನತ್ತ ದನಿ ಮಾಡಿದರು. ಕಟ್ಟೆಯ ಸುತ್ತಣ ಕತ್ತಲೆಯೊಳಗೆ ಕರಗಿಯೇ ಹೋಗಿದ್ದ ಮಾದೇವಿಯ ಕಡೆಯಿಂದ ಸದ್ದೇನೂ ಏಳಲಿಲ್ಲ. ದೊಡ್ಡ ತಮ್ಮಯ್ಯನವರ ಕಡೆಯಿಂದಲೇ ಮಾತು ಬಂತು. 'ಕೇಳ್ದೆ ಇನ್ನೇನ್ ಮಾಡಿಳು. ಹಂಗೂ ಹಿರೀಕರ ಮಾತ ಮೀರಿ ಮುಂದಕ್ಕೊಂದೆಜ್ಜೆ ಮಡಗ್ಲಿ ಮತೆ' ಅಂದರು.

ಒಟ್ಟಿನಲ್ಲಿ ಕಟ್ಟೆಯ ಸುತ್ತ ನೆರೆದ ಎಲ್ಲರಿಗೂ ಮಾದೇವಿಯ ಮೇಲೆ ಅಗಾಧ ಕನಿಕರವಿದ್ದು ಅವಳಿಗೆ ಸಹಾಯ ನೀಡಲು ತಾಮುಂದೆ ನೀ ಮುಂದೆ ಎನ್ನುವಂತೆ ತೋರುತ್ತಿತ್ತು. ಇತ್ತ ಪಡ್ಡೆ ಹೈದರು ಅರಳಿಕಟ್ಟೆಯ ಅಂಗಳದಲ್ಲಿ ರಂಗ ಕುಣಿಯಲು ತುದಿಗಾಲಲ್ಲಿ ನಿಂತದ್ದರಿಂದ ನ್ಯಾಯ ಮುಗಿಯುವುದಕ್ಕೆ ಬಂತು. ಪಂಚಾಯ್ತಿಯ ಗುಂಪು ಕರಗಿ ಕೆಲವರು ಅಲ್ಲೇ ರಂಗ ಕುಣಿಯುವದ ನೋಡಲು ನಿಂತರು. ಗುಡಿಯ ಮುಂದೆ ಮೂರ್ನಾಲ್ಕು ಪಂಜುಗಳು ಭಗ ಭಗ ಉರಿಯತೊಡಗಿದವು. ಹೈದರು ಕಚ್ಚೆ ಬಿಗಿದು ಪೇಟ ಸುತ್ತಿ ಬಳಸಿ ನಿಂತರು. ಹಿಂದು ಮುಂದು ಕೈ ಆಡಿಸಿ, ರುಂಡ ಮುಂಡ ಕುಣಿಸಿ, ಹೆಜ್ಜೆ ಎತ್ತಿ ಇಡುತ್ತ ರಂಗ ಕಟ್ಟಲು, ಮುಮ್ಮೇಳಗಾರ 'ತಾಯೆ ಮಾರವ್ವ ಬೇವಿನ ಮರದಡಿಯಲ್ಲಿ ಮೆರೆವೋಳೆ ನಿಂಗೆ ಬ್ಯಾಟೆ ತಂದು ಕಡಿದೇವು...'ಎಂದು ಹಾಡುತ್ತಿದ್ದ. ಹೈದರ ತುಳಿತಕ್ಕೆ ಸಣ್ಣದಾಗಿ ದೂಳು ಏಳುತ್ತಿತ್ತು.

ಗುಡಿಯ ಪಡಸಾಲೆಗೆ ಕೂತಿದ್ದ ನಾನು ಜಾಗ ಬಿಟ್ಟು ಮನೆ ಸೇರಿ ದೊಡ್ಡಮ್ಮ ಕೊಟ್ಟ ಚಾಪೆ ಬಿಡಿಸಿ ಮೈಹಾಸಿದೆ. ನಿದ್ದೆ ಹತ್ತದ ಕಣ್ಣ ಮುಂದೆ ಜಗಲಿಕಟ್ಟೆಯ ನ್ಯಾಯವೇ ಮೂಡಿತು. ಅಜ್ಜನ ಬಳಿಗೆ ಪರ್ಸಂಗ ಕೇಳಲು ಬರುತ್ತಿದ್ದುದೇ ಅಲ್ಲದೆ, ಮಾದೇವಿ ಹೈಸ್ಕೂಲಿನವರೆಗೂ ನನ್ನೊಂದಿಗೇ ಶಾಲೆಗೆ ಬರುತ್ತಿದ್ದುದರ ನೆನಪು ಹನಿಯತೊಡಗಿತು.

ಮಾದೇವಿ ಶಾಲೆಗೆ ಸೇರಿದ ಒಂದೆರಡು ವರ್ಷಗಳಲ್ಲಿಯೇ ಅವಳು ಸ್ವಲ್ಪ ಬೆಳೆದು ಹುಡುಗಿಯಾಗಲು, ಮನೆಯಲ್ಲಿಯೇ ಕೈತುಂಬ ಕೆಲಸ ಹಚ್ಚಿಕೊಂಡಿತು ಎಂದು ಕಾಣಿಸುತ್ತದೆ. ಹಲಗೆ ಬಳಪ ಹಿಡಿದು ಹೊಸ್ತಿಲು ದಾಟುತ್ತಿದ್ದರೆ ಅಪ್ಪ 'ಅಯ್ ಅಟ್ಟಲಿರ ಕೆಲಸ ಬಿಟ್ಟು ಈ ಹೆಣ್ಣು ಅದೆಲ್ಲೋದದು? ಇಸ್ಕೂಲ್‌ಗೋಗಿ ಅದೇನ್ ಮಂಟಾಕದು' ಅನ್ನುತ್ತಿದ್ದನಂತೆ. ಹೀಗಾಗಿ ನಮ್ಮ ಮನೆಯ ಮುಂದಿಂದ ನಾವಿಬ್ಬರು ಶಾಲೆಗೆ ಹೋಗುತ್ತಿದ್ದವರು. ಒಂದೊಂದು ದಿನ ನಾನೊಬ್ಬನೇ ಆಗುತ್ತಿದ್ದೆ. ಶಾಲೆಗೆ ಬರದ ದಿನ ಮಾಡಿದ ಪಾಠ, ಲೆಕ್ಕ ಅರ್ಥವಾಗದೆ, ಬಂದ ದಿನ ಮೇಷ್ಟ್ರಿಂದ ಏಟು ತಿನ್ನುತ್ತಿದ್ದಳು. ಮನೆಯಿಂದ ತಪ್ಪಿಸಿಕೊಂಡು ಶಾಲೆಗೆ ಬಂದದ್ದಕ್ಕಾಗಿ ಅತ್ತ ಅವ್ವನಿಂದಲೋ ಅಪ್ಪನಿಂದಲೋ ತಿರುಗಿ ನಾಲ್ಕು ಬೀಳುತ್ತಿತ್ತು. ಅಂಥ ಸಂದರ್ಭದಲ್ಲಿ ಮೂಗಿನ ಗೊಣ್ಣೆ ಒರೆಸಿಕೊಳ್ಳುತ್ತ ನನ್ನ ಹುಡುಕಿ ಬಂದು ಒಂದು ಸಹಾಯ ಮಾಡಲೇಬೇಕಾಗಿ ಅಳುತ್ತಿದ್ದಳು. ಹಿಂದಿನ ರಾತ್ರಿಗಳಲ್ಲಿ ಅಜ್ಜನ ಮುಂದೆ ಕೂತು ನಾವೆಲ್ಲ ಕೇಳಿದ್ದ ಕಥೆಯ ಸಂಗತಿ ನೆನಪಿಸಿ ತನ್ನ ಹೇಗಾದರೂ ಮಾಡಿ ಕಾಡಿಗೆ ಕರೆದುಕೊಂಡು ಹೋಗಿ ಗಂಡು ಕರಡಿಯ ಕೈಗೆ ಸಿಕ್ಕಿಸಿ ಬರಲು ಅಂಗಲಾಪು ಬೀಳುತ್ತಿದ್ದಳು.

ಮೇಲಿನಂಥ ಸಂದರ್ಭ ಬಿಟ್ಟರೆ ಮಾದೇವಿ ತಿರುಗಿ ಯಾವತ್ತಾದರೂ ಒಂದು ಸಾಯಂಕಾಲ ರಾಜ್ಯ ಗೆದ್ದವಳಂತೆ ಓಡಿಬರುತ್ತಿರುವುದು ಕಾಣಿಸುತ್ತಿತ್ತು. ಇಬ್ಬರೂ ಹಿತ್ತಲ ಅಸುವಾರದ ಮರದಡಿಗೆ ಲಗುಬಗೆಯಿಂದ ಹೊರಟು, ಅವಳು ತಂದದ್ದನ್ನೆಲ್ಲ ನಾನು ತಿಂದು ಮುಗಿಸಿದ ಮೇಲೆ